**<u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ</u>**

ಓಎಸ್.232–2010

ಪಿ.ಡಬ್ಲ್ಯೂ.2

ಹೆಸರುಃ ಕೃಷ್ಣಪ್ಪ

ಪ್ರಮಾಣೀಕೃತ ದಿನಾಂಕಃ–16.08.2018

**ಪಾಟೀ ಸವಾಲು ಪ್ರತಿವಾದಿ ಪರ ಸಿ.ಎನ್.ಎನ್.ವಕೀಲರಿಂದಃ–**

ಈ ದಾವೆಯನ್ನು ಸರ್ವೆ ನಂ. 141ರ 26 ಗುಂಟೆ ಸಂಬಂಧಪಟ್ಟಂತೆ ಹೂಡಲಾಗಿರುತ್ತದೆ. ದಾವಾ ಆಸ್ತಿಯ ಚಕ್ಕುಬಂದಿ ಹೇಳಲಾಗುವುದಿಲ್ಲ. ದಾವಾ ಆಸ್ತಿಯನ್ನು ರಾಮಣ್ಣ ಎಂಬುವವರಿಂದ ವಾದಿ ಪಡೆದುಕೊಂಡಿರುತ್ತಾನೆ. ಸದರಿ ಸ್ವತ್ತನ್ನು ರಾಮಣ್ಣನವರು ಖರೀದಿಸಿದ್ದರು. ರಾಮಣ್ಣನವರ ತಂದೆ ಹೆಸರು ಕೆಂಚ ಮುನಿಯಪ್ಪ. ರಾಮಣ್ಣನವರ ಹೆಂಡ್ತಿ ಹೆಸರು ಮುನಿಯಮ್ಮ ಎಂದರೆ ಸರಿ. ರಾಮಣ್ಣನವರಿಗೆ ಕೆಂಚ ಮುನಿಯಪ್ಪ ಎಂಬ ಮಗನಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರಾಮಣ್ಣನಿಗೆ ಯಾವುದೇ ಮಕ್ಕಳಿಲ್ಲ ಎಂದು ಹೇಳಿರುತ್ತಾರೆ. ರಾಮಣ್ಣನವರು ನಮ್ಮ ಅಕ್ಕ–ಪಕ್ಕದವರು. ರಾಮಣ್ಣನವರು ಮೃತಪಟ್ಟು ಸುಮಾರು 35 ವರ್ಷಗಳಾಗಿರುತ್ತದೆ.

ರಾಮಣ್ಣನವರು ದಿ: 16.04.1968 ರಲ್ಲಿ ಮೃತಪಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ರಾಮಣ್ಣನವರ ಕುಟುಂಬದ ವ್ಯವಹಾರದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿ. ವಿಲ್ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲಾಗುವುದಿಲ್ಲ. ವಿಲ್ ಬರೆಯುವ ಸಂದರ್ಭದಲ್ಲಿ ನಾನು ಇದ್ದೇ. ಸದರಿ ವಿಲ್ ರಿಜಿಸ್ಟರ್ ಆಗಿಲ್ಲ ಎಂದರೆ ಸರಿ. ರಾಮಣ್ಣನವರು ಯಾವುದೇ ವಿಲ್ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ಹೆಸರು ಕೆಂಚ ಮುನಿಯಪ್ಪ ಎಂದರೆ ಇರಬಹುದು. ದಾವಾ ಆಸ್ತಿಯಲ್ಲಿ ಪ್ರತಿವಾದಿಯ ತಂದೆ ಮತ್ತು ರಾಮಣ್ಣ ಎಂಬುವವರ ಸಮಾಧಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಯಲ್ಲಿ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೇ ಎಂದರೆ ಸರಿಯಲ್ಲ. ವಾದಿ ನಮ್ಮ ಸ್ನೇಹಿತ ಮತ್ತು ಸಂಬಂಧಿ ಎಂದರೆ ಸರಿ. ಸಂಬಂಧೀಯಾಗಿರುವ ಕಾರಣ ವಾದಿ ಪರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಎಂದಿಗೂ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಹೊಸಕೋಟೆ.**